ರಾಜು ಎಸ್. ಗಾಲಿ, ಅಥಣಿ

◆ ಜೆಸಿಬಿ ಪಕ್ಷಗಳು ಕುಟುಂಬ ರಾಜಕಾರಣ ಮಾಡುತ್ತಿವೆ. ಇದಕ್ಕೆ ಏನು ಮಾಡಬೇಕು?



ನಿರ್ದಾಕ್ಷಿಣ್ಯವಾಗಿ ಕುಟುಂಬದ ಎಲ್ಲ ಸದಸ್ಯರನ್ನು ಸೋಲಿಸಿದರೆ ಮಾತ್ರ ಪ್ರಜಾಪ್ರಭುತ್ವಕ್ಕೆ ಜಯ.

ಹಾಡ್ಯ ಬಿ. ಜಯಾನಂದ, ಮೈಸೂರು

◆ ನಲವತ್ತು ದಾಟಿದ ಗಂಡಸರು ಮುದುಕರಂತೆ; ನಲವತ್ತು ದಾಟಿದ ಮಹಿಳೆಯರು?

ನವೀಕೃತ (renewed) ಟೀನೇಜರ್ಸ್!

ಗಂಜಾಂ ನಾಗರಾಜ, ಮೈಸೂರು

◆ ಕರೀ ಕೋಟಿನ ಲಾಯರ್‌ಗೂ, ಬಿಳಿ ಕೋಟಿನ ಡಾಕ್ಟರ್‌ಗೂ ಏನು ವ್ಯತ್ಯಾಸ?

ಗಿರಾಕಿಗಳದೇ; ಇವರವು ಹೀನ ರಕ್ತ (ಅನುರಾಗ); ಅವರವು ರಕ್ತಹೀನ.

ಎಚ್.ಎಂ. ಅನಂತಪದ್ಮನಾಭ, ಮೈಸೂರು

◆ ನಾನು ಸತ್ತರೆ ಗಣೇಶನಿಗೆ 101 ತೆಂಗಿನಕಾಯಿ ಒಡೆಯುತ್ತೇನೆಂದು ಹರಕೆ ಹೊತ್ತಿದ್ದೇನೆ. ಹರಕೆ ತೀರಿಸಬಹುದೆ?



'ನಾನು' ಬದಲಿಗೆ 'ನಾವು' ಎನ್ನಲಾರಂಭಿಸಿ. 'ನಾನು' ಸಾಯುತ್ತದೆ, ನಿಮ್ಮ ಹರಕೆಗೆ ಗ್ರೀನ್ ಸಿಗ್ನಲ್!

ಭಾರತಿ ಮಾನಗೆ, ಹೊನ್ನಾವರ

◆ ಹಣತೆ ಚಿಕ್ಕದಾದರೂ ಅದರ ಬೆಳಕು ದೊಡ್ಡದು. ಏಕೆ?

ಬತ್ತಿಯ ಪ್ರಭಾವ; ಸಣ್ಣ ಕಿಡಿಯೂ ಬತ್ತಿ ಇಟ್ಟರೆ ದೊಡ್ಡದಾಗಿಬಿಡುತ್ತದೆ!

ಎ.ಕೆ. ಪಟ್ಟಾಭಿ, ಬೆಂಗಳೂರು

◆ ಗಂಡಂದಿರು ಗಡ್ಡ ಮೀಸೆ ಬೆಳೆಸಲು ಮುಂದಾದರೆ ಹೆಂಡಂದಿರು ಏಕೆ ಅಡ್ಡಿ ಬರುತ್ತಾರೆ?

ತಮ್ಮ ಮುಂದೆ ದಾಡಿ ಸವರಿಕೊಳ್ಳುವ, ಮೀಸೆ ತಿರುವುವ ಉದ್ಧಟತನ ಸಹಿಸಲಾರರಂತೆ.

ಬೂಕನಕೆರೆ ವಿಜೇಂದ್ರ, ಮೈಸೂರು

◆ ದೇವರೇಕೆ ಯಾವಾಗಲೂ ಶ್ರೀಮಂತರ ಪರವಾಗಿಯೇ ಇರುತ್ತಾನೆ?

ದೇಗುಲ ಬೇಕಲ್ಲ. ಬಡವರ ಪರವಾಗಿಯೇ ಇದ್ದರೆ ಬಯಲೇ ಗಟ್ಟಿ ಎನ್ನಲು ಬಯಲಾಂಜನೇಯನೇ ಸಾಕ್ಷಿ.

ಟಿ.ಎಂ. ಮಾನಪ್ಪ, ಶಿವಮೊಗ್ಗ

◆ ಮದುವೆಯಲ್ಲಿ ಮದುಮಕ್ಕಳು ಏರುವುದಕ್ಕೆ 'ಹಸೆಮಣೆ' ಅನ್ನೋದೇಕೆ?

ಹ(ಹದಿಯರೆಯದ) ಸೆ(ಸೆಳೆತ) ಆ ಮಣೆಯಲ್ಲಿ ಹೊಮ್ಮುವುದಂತೆ.

ಪಿ. ಚಿದಾನಂದ, ಚಿತ್ರದುರ್ಗ

◆ ಸಮಾಜದಲ್ಲಿ ಸಮಾನತೆಯನ್ನು ಯಾವಾಗ ಕಾಣಬಹುದು?

ಎಲೆಕ್ಷನ್ ಟೈಮಲ್ಲಿ ಆಗ ಬೇಜವಾಬ್ದಾರಿಯಲ್ಲಿ ಓಟರ್, ಲೀಡರ್ ಇಬ್ಬರೂ ಸಮಾನರು.

ರತ್ನಾ ಅಶೋಕ ಗೊರವರ, ಧಾರವಾಡ

◆ ಹರಿಯುವ ನದಿಗೆ ಅಣೆಕಟ್ಟಿನ ಬಂಧನ. ಹೆಣ್ಣಿನ ಬೇಡಿಕೆಗೆ?

ಇಎಂಐ ಕಟ್ಟುವ ಬಂಧನ.

ಎಸ್.ಎನ್. ಮಹಾಬಲರಾವ್, ಎನ್ನಾರ್‌ಪುರ

◆ ಪ್ರಾಯದ ಬಗ್ಗೆ ಅಭಿಪ್ರಾಯವೇಕೆ?

ಪ್ರಾಯೋಪವೇಶದ ಪರಿಸ್ಥಿತಿ ಪ್ರಾಪ್ತವಾಗದಿರಲೆಂದು.

ಸುಲೋಚನಾ ವಾದಿರಾಜ್, ಹೊಳೆಹೊನ್ನೂರು

◆ ಈಗೀಗ ವಿದ್ಯೆ ಕಲಿಸುವ ಟೀಚರ್‌ಗಳೂ ಕೂಡ ಸಿನಿಮಾ ನಟಿಯರಂತೆ ಅಲಂಕರಿಸಿಕೊಳ್ಳುವುದು ಏಕೆ ಗುರುವೆ?

ಮೊದಲು ನೋಟದಿಂದ ಸೆಳೆದರೆ ನಂತರ ನೋಟ್ಸಿನಿಂದಲೂ ಸೆಳೆಯಬಹುದೆಂದು.

ಶೃತಿ ರಿಗ್ರೆಟ್ ಅಯ್ಯರ್, ಬೆಂಗಳೂರು

◆ ಗಾಂಧೀ ಟೋಪಿಗೆ ಈಗ ಎಷ್ಟು ಮಹತ್ವವಿದೆ ಸಾರ್?

ಗಾಂಧಿಗೆ ಇಲ್ಲ; 'ಟೋಪಿ'ಗೆ ಇದೆ.

## ಬಹುಮಾನಿತ ಪ್ರಶ್ನೆ

ಎಚ್.ಆರ್. ದೇಸಾಯಿ, ರಾಯಚೂರು

◆ ಹುಡುಗಿಯರು ಪ್ಯಾಂಟು, ಟಾಪುಗಳನ್ನು ಹಾಕಲು ನಾಚುವುದಿಲ್ಲ. ಹುಡುಗರೇಕೆ ಸೀರೆ ಉಡಲು ನಾಚುತ್ತಾರೆ?

ಅವರು ಟಾಪಲ್ಲೂ ಟಾಪ್ ಆಗಿರುತ್ತಾರೆ. ಇವರು ಸೀರೆಯಲ್ಲಿ 'seeರೇ' ಎನ್ನುವ ಮಟ್ಟಕಿರಲ್ವಲ್ಲ!

ಕೃಷ್ಣಮೂರ್ತಿ ಎಸ್., ಬೆಂಗಳೂರು

◆ ಸಣ್ಣ, ದಪ್ಪ, ಉದ್ದ, ಕುಳ್ಳ; ಇವುಗಳಲ್ಲಿ ಯಾವ ರೀತಿಯ ಹುಡುಗಿಯನ್ನು ಮದುವೆಯಾದರೆ ಸುಖವಾಗಿರಬಹುದು?

ಸಣ್ಣತನ ನಡುವಿನಲ್ಲಿ, ತೂಕ ಮಾತಿನಲ್ಲಿ, ದೀರ್ಘತೆ ಆಲೋಚನೆಯಲ್ಲಿ, ಗಿಡ್ಡತನ ವ್ಯಯದಲ್ಲಿ ಇರುವಳನ್ನು.

ರಮೇಶ್, ಹನುಮನಾಳು

◆ ಪಾತ್ರೆಗಳನ್ನು ಕಡಿದುಹಾಕುವ ಇಲಿ ತಾನು ಸಿಕ್ಕಿಕೊಂಡ ಬೋನನ್ನು ಏಕೆ ಕಡಿದು ಬರುವುದಿಲ್ಲ?



ಜಾಗ ಸಾಲದುದರಿಂದ ಗ್ರಿಪ್ ಸಿಗುವುದಿಲ್ಲವಂತೆ.

ಹೆಚ್.ಕೆ. ವಿಜಯಕುಮಾರ್, ರಾಯಚೂರು

◆ ಜಾತ್ಯತೀತ ಎಂದು ಹೇಳಿಕೊಂಡು ಜಾತಿಗೆ ಅಂಟಿಕೊಂಡವರಿಗೆ ಏನು ಹೇಳುತ್ತೀರಿ?

ನುಡಿದಂತೆ ನಡೆವವರೆಂದು. ಜಾತಿ+ಅತಿ+ಈತನೇ ಜಾತ್ಯತೀತ.

ಮುರಲೀಧರ ಕುಲಕರ್ಣಿ, ಬೀದರ್

◆ ಮನುಷ್ಯರಿಗೆ ಬರುವ ರೋಗಗಳೆಲ್ಲ ಮೊದಲು ಪ್ರಾಣಿಗಳಿಗೆ ಏಕೆ ಬರುತ್ತವೆ?

ವಿಜ್ಞಾನಿಗಳಂತೆಯೇ ರೋಗಾಣುಗಳೂ ಮೊದಲ ಪ್ರಯೋಗವನ್ನು ಪ್ರಾಣಿಗಳ ಮೇಲೆ ಮಾಡುವುದರಿಂದ.

■ ರಾಮ್